# ಪುಟಾಣಿಗಳ ಶಾರ್ಟ್ಸ್; ಫುಲ್ ಖುಷ್!

ಪುಟಾಣಿಗಳಿಗೆ ಶಾರ್ಟ್ಸ್ ಚೆನ್ನಾಗಿ ಕಾಣಿಸುತ್ತದೆ. ಧರಿಸಲೂ ಆರಾಮದಾಯಕ. ಡೆನಿಮ್, ಜೀನ್ಸ್‌ನಲ್ಲಿ ಸಿದ್ಧಪಡಿಸಿದ ಶಾರ್ಟ್ಸ್ ತಮ್ಮ ಮಕ್ಕಳಿಗಾಗಿ ಪೋಷಕರು ಆಯ್ದುಕೊಂಡರೆ, ಮಕ್ಕಳ ಆಯ್ಕೆಯೂ ಇದೇ ಆಗಿರುತ್ತದೆ.

■ **ಪವಿತ್ರಾ ಶೆಟ್ಟಿ**



ಮಕ್ಕಳ ಬಟ್ಟೆ ಆರಿಸುವಾಗ ಎಷ್ಟು ಎಚ್ಚರ ವಹಿಸಿದರೂ ಸಾಲದು. ಅಪ್ಪ ಅಮ್ಮನ ಕಣ್ಣಿಗೆ ಚೆಂದವಾಗಿ ಕಾಣುವ ಬಟ್ಟೆ ಮಕ್ಕಳ ಮೈಗೆ ಕಿರಿಕಿರಿ ಅನಿಸುವಂತಿರುತ್ತದೆ. ಮದುವೆ ಮುಂತಾದ ಕಾರ್ಯಕ್ರಮಗಳು ಬಂದಾಗ ಲೆಹೆಂಗಾ, ಜರಿ ಅಂಚಿನ ಲಂಗ ಬ್ಲೌಸ್, ಪ್ಯಾಂಟ್ ಶರ್ಟ್, ಕುರ್ತಾ ಪೈಜಾಮಾ ಹಾಕಿ ಅವರ ಅಂದ ಕಣ್ತುಂಬಿಕೊಳ್ಳೋಣವೆಂದು ತಂದೆ ತಾಯಿ ಅಂದುಕೊಳ್ಳುತ್ತಿದ್ದರೆ ಮಕ್ಕಳು ಮಾತ್ರ ಸುತರಾಂ ಇದಕ್ಕೆ ಒಲ್ಲೆ ಎನ್ನುತ್ತಾರೆ. ಅದು ಇಲ್ಲಿ ಚುಚ್ಚುತ್ತೆ, ಇದು ನಡೆಯೋಕೆ ಆಗಲ್ಲ ಹೀಗೆ ದೂರುಗಳ ಪಟ್ಟಿಯೇ ನೀಡುತ್ತಾರೆ.

ದೊಡ್ಡವರು ಹೇಗೆ ಆರಾಮದಾಯಕವಾದ ಬಟ್ಟೆ ಧರಿಸುವುದಕ್ಕೆ ಇಷ್ಟಪಡುತ್ತಾರೋ ಮಕ್ಕಳೂ ಕೂಡ ಹಾಗೇ. ಧರಿಸಲು ಆರಾಮಾಗಿರುವ, ಆಟವಾಡುವುದಕ್ಕೆ, ಕುಣಿದು ಕುಪ್ಪಳಿಸೋಕೆ ರಗಳೆ ಆಗದೇ ಇರುವಂತಹ ಬಟ್ಟೆಯನ್ನೇ ಹೆಚ್ಚು ಇಷ್ಟಪಡುತ್ತಾರೆ. ಮೈಗೆ ಚುಚ್ಚುವ, ಇಡೀ ಮೈಯನ್ನು ಮುಚ್ಚುವ ಬಟ್ಟೆ ಹಾಕಿದರೆ ಹತ್ತು ನಿಮಿಷವೂ ಅವರು ಅದನ್ನು ಮೈಮೇಲೆ ಇಟ್ಟುಕೊಳ್ಳದೆ ಕಿರಿಕಿರಿ ಅನುಭವಿಸುತ್ತಾರೆ.

ಮಕ್ಕಳಿಗೆ ಆದಷ್ಟು ಆರಾಮದಾಯಕವಾದ ಬಟ್ಟೆ ಎಂದರೆ ಅದು ಜೀನ್ಸ್ ಶಾರ್ಟ್ಸ್ ಮೇಲೊಂದು ಟೀ ಶರ್ಟ್. ಮಳೆಗಾಲ, ಚಳಿಗಾಲ, ಬೇಸಿಗೆಗಾಲವಿರಲಿ ಅವರಿಗೆ ಈ ಶಾರ್ಟ್ಸ್‌ವೊಂದು ಇದ್ದರೆ ಸಾಕು. ಇನ್ನು ಈ ಪುಟಾಣಿ ಮಕ್ಕಳು ಜೀನ್ಸ್ ಶಾರ್ಟ್ಸ್‌ನಲ್ಲಿ ತುಂಬಾ ಮುದ್ದಾಗಿ ಕಾಣುತ್ತಾರೆ ಕೂಡ. ಬೇರೆ ಬಟ್ಟೆಗಳಿಗೆ ಹೋಲಿಸಿದರೆ ಇದನ್ನು ಧರಿಸುವುದಕ್ಕೆ ಮಕ್ಕಳು ಹೆಚ್ಚು ಇಷ್ಟಪಡುತ್ತಾರೆ.

ಚಿಕ್ಕ ಚಡ್ಡಿಯಂತಿರುವ ಈ ಶಾರ್ಟ್ಸ್ ಸಣ್ಣ ಮಕ್ಕಳಿಂದ ಹಿಡಿದು ಈಗ ಹರೆಯದ ಹುಡುಗ ಹುಡುಗಿಯರವರೆಗೂ ಇಷ್ಟದ ದಿರಿಸು. ನಾನಾ ವಿನ್ಯಾಸದ, ವಿಭಿನ್ನ ಬಣ್ಣದ ಶಾರ್ಟ್ಸ್‌ಗಳು ಈಗ ಮಾರುಕಟ್ಟೆಯಲ್ಲಿವೆ. ಸ್ಟೈಲಿಷ್ ಹಾಗೂ ಆರಾಮದಾಯಕವಾದ ಈ ಶಾರ್ಟ್ಸ್ ಬಗೆಗಿನ ಮಾಹಿತಿಯೂ ಕುತೂಹಲಕಾರಿ.

1960ರಲ್ಲಿ ಶಾರ್ಟ್ಸ್ ಧರಿಸುವುದು ಕಾನೂನುಬಾಹಿರ ಎಂದ ಯುಎಸ್ ನಗರದ ಕಾನೂನಿನ ಕುರಿತು ಜನರು ದಂಗೆ ಏಳುತ್ತಾರೆ. ತಮ್ಮ ಜೀನ್ಸ್ ಪ್ಯಾಂಟ್‌ಗಳ ಕಾಲನ್ನು ಚಿಕ್ಕದಾಗಿ ಕತ್ತರಿಸಿ ಅದನ್ನು ಶಾರ್ಟ್ಸ್ ರೂಪದಲ್ಲಿ ಧರಿಸಿ ಕಾನೂನಿಗೆ ಸೆಡ್ಡು ಹೊಡೆಯುತ್ತಾರೆ. 1970ರಲ್ಲಿ ಈ ಜೀನ್ಸ್ ಶಾರ್ಟ್ಸ್ ಮಹಿಳೆಯರು ಹಾಗೂ ಪುರುಷರ ಅಚ್ಚುಮೆಚ್ಚಿನ ದಿರಿಸಾಯಿತು. 1980ರಲ್ಲಿ ಮಡೋನಾಳಂತಹ ಸೆಲಿಬ್ರಿಟಿಗಳು ಇದನ್ನು ಮತ್ತಷ್ಟು ಪ್ರಸಿದ್ಧಿಗೊಳಿಸಿದರು. ಇನ್ನು ಮಕ್ಕಳ ಶಾರ್ಟ್ಸ್ ವಿಷಯಕ್ಕೆ ಬರುವುದಾದರೆ ವಿಭಿನ್ನ ಶೈಲಿಗಳಲ್ಲಿ ಇಂದು ಮಾರುಕಟ್ಟೆಯಲ್ಲಿ ಲಭ್ಯವಿದೆ. ಕಾರ್ಗೋ, ಬೋರ್ಡ್, ಮದ್ರಾಸ್ ಮತ್ತು ನಿಟ್ ಪುಲ್‌ಆನ್ ಶಾರ್ಟ್ಸ್ ಇವೆಲ್ಲವೂ ಬೇಸಿಗೆಗೆ ಉತ್ತಮ ಆಯ್ಕೆಗಳಾಗಿವೆ.

## ಕಾರ್ಗೋ ಶಾರ್ಟ್ಸ್

ಮಗು ಹೊರಗೆ ಜಾಸ್ತಿ ಸಮಯ ಕಳೆಯುತ್ತಿದ್ದರೆ, ಕುಣಿದು ಕುಪ್ಪಳಿಸುವುದು, ಹಾರುವುದು... ಇಂತಹ ಚಟುವಟಿಕೆ ಅವರಿಗೆ ಇಷ್ಟವಾಗಿದ್ದರೆ ಅವರಿಗೆ ಈ ಕಾರ್ಗೋ ಶಾರ್ಟ್ಸ್ ಹೇಳಿ ಮಾಡಿಸಿದ್ದು. ಈ ಶಾರ್ಟ್ಸ್ ವಿವಿಧ ಬಣ್ಣಗಳಲ್ಲಿ ಲಭ್ಯವಿದೆ ಮತ್ತು ಆರಾಮದಾಯಕ ಫಿಟ್‌ಗಾಗಿ ಸೊಂಟದ ಬ್ಯಾಂಡ್‌ಗಳನ್ನು ಹೊಂದಿವೆ. ಇದರಲ್ಲಿ ಬಣ್ಣ ಬಣ್ಣ ವಿನ್ಯಾಸಗಳಿವೆ. ಇವು ಮಕ್ಕಳಿಗೆ ಆರಾಮದಾಯಕವಾಗಿರುತ್ತದೆ. ಅವರಿಗೆ ಧರಿಸುವುದಕ್ಕೂ ಸೂಕ್ತವಾಗಿರುತ್ತದೆ. ಗ್ರಾಫಿಕ್